ಆರ್‌ಬಿಐ/2008-09/249
ಉಲ್ಲೇಖ ಡಿಜಿಬಿಎ.ಸಿಡಿಡಿ. ಸಂ.ಎಚ್-3854/13.01.299/2008-09

ಆಕ್ಟೋಬರ್ 24, 2008
ಕಾರ್ತಿಕ 2, 1930(ಎಸ್)

ಮಹಾ ವ್ಯವಸ್ಥಾಪಕರು
ಭಾರತೀಯ ಸ್ಟೇಟ್ ಬ್ಯಾಂಕ್ ಮತ್ತು ಸಹವರ್ತಿ ಬ್ಯಾಂಕುಗಳು
17 ರಾಷ್ಟ್ರೀಕೃತ ಬ್ಯಾಂಕುಗಳು
ವ್ಯವಸ್ಥಾಪಕ ನಿರ್ದೇಶಕರು
ಆಕ್ಸಿಸ್ ಬ್ಯಾಂಕ್ ನಿ./ಎಚ್‌ಡಿಎಫ್‌ಸಿ ಬ್ಯಾಂಕ್ ನಿ./ಐಸಿಐಸಿಐ ಬ್ಯಾಂಕ್ ನಿ./ಐಡಿಬಿಐ ಬ್ಯಾಂಕ್ ನಿ.
ಮತ್ತು ಎಸ್‌ಎಚ್‌ಸಿಐಎಲ್

ಮಾನ್ಯರೆ

**<u>ಪರಿಹಾರ/ ಉಳಿತಾಯ ಬಾಂಡುಗಳು- ಗ್ರಾಹಕ ಹಕ್ಕುಗಳು</u>**

ನಮ್ಮ ದಿನಾಂಕ ಎಪ್ರೀಲ್ 22, 2004ರ ಸುತ್ತೋಲೆ ಸಂಖ್ಯೆ ಆರ್‌ಬಿಐ/2004/181(ಉಲ್ಲೇಖ ಸಂಖ್ಯೆ ಡಿಜಿಬಿಎ.ಸಿಒ.ಡಿಟಿ. ಸಂ. 13.01.299/ ಎಚ್-6252/2003-04)ನ್ನು ದಯವಿಟ್ಟು ಗಮನಿಸಿ. ಅದರಲ್ಲಿ, ಉಳಿತಾಯ ಬಾಂಡುಗಳಲ್ಲಿ ಹೂಡಿಕೆಗಾಗಿ, ಇತರ ವಿಷಯಗಳ ಜೊತೆಗೆ ಹೂಡಿಕೆದಾರರ ಕರ್ತವ್ಯ ಮತ್ತು ಹಕ್ಕುಗಳ ಮಾಹಿತಿಗಳನ್ನೊಳಗೊಂಡ ಒಂದು ಏಕರೂಪದ ಅರ್ಜಿನಮೂನೆಯನ್ನು ಬಳಸಲು ಏಜೆನ್ಸಿ ಬ್ಯಾಂಕುಗಳಿಗೆ ಸೂಚಿಸಲಾಗಿದೆ.

2. ಇದಕ್ಕೆ ಸಂಬಂಧಿಸಿದಂತೆ, ಸಾರ್ವಜನಿಕ, ವೈಯಕ್ತಿಕ ಸೇವೆಗಳ ಸುಧಾರಣೆಗಾಗಿ ಭಾರತೀಯ ರಿಸರ್ವ್ ಬ್ಯಾಂಕಿನ ನೇರ ಅಥವಾ ಬ್ಯಾಂಕುಗಳ/ ಸಂಸ್ಥೆಗಳ ಮೂಲಕ ತೆಗೆದುಕೊಂಡಂತಹ ಪ್ರಯತ್ನಗಳ ಮೌಲೀಕರಣ ಮಾಡುವುದಕ್ಕೆ ಮತ್ತು ಈಗಿರುವ ನೀತಿಗಳು ಮತ್ತು ಪ್ರಕ್ರಿಯೆಗಳ ಸುವ್ಯವಸ್ಥೆಯನ್ನು ಗಮನದಲ್ಲಿರಿಸಿ ಮರು-ವಿಮರ್ಶೆ ಮಾಡುವ ಸಲುವಾಗಿ ಬ್ಯಾಂಕು ಒಂದು ಸಮಿತಿಯನ್ನು(ಅಧ್ಯಕ್ಷತೆ: ಶ್ರೀ ಎಚ್ ಪ್ರಭಾಕರ್ ರಾವ್) ರಚಿಸಿದೆ ಎಂದು ತಿಳಿಸಲಾಗಿದೆ. ಸಮಿತಿಯು, ಇತರ ವಿಷಯಗಳ ಜೊತೆಗೆ ಶಿಫಾರಸುಮಾಡುವುದೇನೆಂದರೆ / ಸಲಹೆ ನೀಡುವುದೇನೆಂದರೆ : ಬಾಂಡುಗಳನ್ನು ಖರೀದಿಸಲು ಏಕರೂಪದ ಅರ್ಜಿ ನಮೂನೆಯಲ್ಲಿ ಪ್ರಸ್ತುತವಿರುವ ಹೂಡಿಕೆದಾರರ ಹಕ್ಕುಗಳನ್ನು ಸೇರಿಸಿ ಹೂಡಿಕೆದಾರರಿಗೆ ಬಿಡುಗಡೆ ದಿನಾಂಕ, ಒಂದು ಏಜೆನ್ಸಿ ಬ್ಯಾಂಕಿನಿಂದ ಮತ್ತೊಂದು ಬ್ಯಾಂಕಿಗೆ ವರ್ಗಾಯಿಸುವ ಹಕ್ಕು, ವಿಳಂಬ ಪಾವತಿಗೆ ಉಳಿತಾಯ ಬ್ಯಾಂಕ್ ಖಾತೆ ಬಡ್ಡಿಯನ್ನು ಪಡೆಯುವುದೇ ಮುಂತಾದ ಹಕ್ಕುಗಳು ಹೂಡಿಕೆದಾರರಿಗೆ ಎದ್ದು ಕಾಣುವಂತೆ ಮುದ್ರಿಸಿರಬೇಕು.

3. ಸಮಿತಿಯ ಶಿಫಾರಸುಗಳನ್ನು ಭಾರತೀಯ ರಿಸರ್ವ್ ಬ್ಯಾಂಕ್ ಅಂಗೀಕರಿಸಿದೆ. ಅದರಂತೆ, ಶೇಕಡಾ 8, ಉಳಿತಾಯ (ತೆರಿಗೆಗೊಳಪಡುವ) ಬಾಂಡುಗಳು 2003ನ್ನು ನೀಡುತ್ತಿರುವ ಹಾಗೂ ನಿರ್ವಹಿಸುತ್ತಿರುವ ಏಜೆನ್ಸಿ ಬ್ಯಾಂಕುಗಳು ಈ ಅನುಬಂಧದಲ್ಲಿ ತಿಳಿಸಿರುವಂತೆ ಪರಿಷ್ಕೃತ ಹಕ್ಕುಪಟ್ಟಿಯನ್ನು ಅರ್ಜಿಗಳ ಜೊತೆ ಹೊಂದಿರಬೇಕು.

4. ಮುಂದುವರಿದಂತೆ, ಬಹಳ ಬ್ಯಾಂಕುಗಳಲ್ಲಿ, ಅದರಲ್ಲೂ ವಿಶೇಷವಾಗಿ ಸಾರ್ವಜನಿಕ ಬ್ಯಾಂಕುಗಳಲ್ಲಿ ಇತರೇ ಕೆಲಸಕಾರ್ಯಗಳು ಗಣಕೀಕೃತಗೊಂಡಿದ್ದರೂ ಬಾಂಡುಗಳ ನೀಡಿಕೆ ಹಾಗೂ ನಿರ್ವಹಣೆಯ ಎಲ್ಲ ಕೆಲಸ ಕಾರ್ಯಗಳನ್ನು ಗಣಕ ಯಂತ್ರವನ್ನು ಬಳಸದೇ

ನಿರ್ವಹಿಸುತ್ತಿರುವುದನ್ನು ಸಮಿತಿಯು ಗಮನಿಸಿದೆ. ತಪ್ಪು ಮತ್ತು ವಿಳಂಬದಿಂದ ಹೂಡಿಕದಾರರಿಗೆ ಉಂಟಾಗಬಹುದಾದ ಅನಾನುಕೂಲ ಹಾಗೂ ನಷ್ಟ ಮತ್ತು ಈಗಾಗಲೇ ಗಣಕೀಕರಣ ಮಾಡದೇ ಇದ್ದಲ್ಲಿ ಬಾಂಡುಗಳ ಸಕಾಲಿಕ ನಿರ್ವಹಣೆಯನ್ನು ಖಚಿತಗೊಳಿಸಿಕೊಳ್ಳುವ ನಿಟ್ಟಿನಲ್ಲಿ ಉಳಿತಾಯ ಬಾಂಡುಗಳ ಪ್ರಕ್ರಿಯೆಯನ್ನು ಗಣಕೀಕರಣ ಮಾಡಬೇಕೆಂದು ಏಜೆನ್ಸಿ ಬ್ಯಾಂಕುಗಳಿಗೆ ಸೂಚಿಸಲಾಗಿದೆ.

5. ಇದೂ ಅಲ್ಲದೆ, ಊಳಿತಾಯ ಬಾಂಡುಗಳ ಬಡ್ಡಿ ಮತ್ತು ಪಕ್ವತಾಮೊತ್ತದ ವಿತರಣೆಗೆ ಇಸಿಎಸ್ ಮತ್ತು ಎನ್‌ಇಎಫ್ಟಿ ಅಂತಹ ವಿದ್ಯುನ್ಮಾನ ನಿರ್ವಹಣಾ ಪದ್ಧತಿಗೆ ಬದಲಾವಣೆ ಮಾಡಿಕೊಳ್ಳಲು ಹೂಡಿಕೆದಾರರ ಬ್ಯಾಂಕು ಖಾತೆಗಳ ವಿವರ ಪಡೆದುಕೊಳ್ಳಲು ಸಕ್ರಿಯ ಪ್ರಯತ್ನ ಮಾಡಬೇಕೆಂದು ಸಮಿತಿಯು ಶಿಫಾರಸು ಮಾಡಿದೆ. ಈ ಸಂಬಂಧ, ಏಜೆನ್ಸಿ ಬ್ಯಾಂಕುಗಳು ಸಾಧ್ಯವಾದಷ್ಟು ಬಡ್ಡಿ ಮತ್ತು ಅಸಲಿನ ಪಾವತಿಗೆ ಇಸಿಎಸ್/ ಎನ್‌ಇಎಫ್ಟಿ ಸೌಲಭ್ಯವನ್ನು ಬಳಸಿಕೊಳ್ಳಬೇಕೆಂದು ಮತ್ತು ಇಸಿಎಸ್/ ಇಎಫ್ಟಿ ಆಯ್ಕೆಯನ್ನು ಕಾರ್ಯಗತಗೊಳಿಸದೇ ಇದ್ದ ಏಜೆನ್ಸಿ ಬ್ಯಾಂಕುಗಳು ಅದನ್ನು ಆದಷ್ಟು ಬೇಗ ಕಾರ್ಯಗತಗೊಳಿಸಬೇಕಾಗಿ ಸೂಚಿಸಿರುವ ದಿನಾಂಕ ಸೆಪ್ಟೆಂಬರ್ 24, 2007ರ ನಮ್ಮ ಸುತ್ತೋಲೆ ಸಂಖ್ಯೆ ಡಿಜಿಬಿಎ.ಸಿಡಿಡಿ.ಸಂ. ಎಚ್–3249/13.01.299/2007–08ಗೆ ತಮ್ಮ ಗಮನವನ್ನು ಸೆಳೆಯಲಾಗಿದೆ. ಮೇಲಿನ ಸೂಚನೆಗಳನ್ನು ಪಾಲಿಸಲು ಮತ್ತೊಮ್ಮೆ ಒತ್ತಿ ಹೇಳುತ್ತಾ ಏಜೆನ್ಸಿ ಬ್ಯಾಂಕುಗಳು ಲಭ್ಯವಿರುವೆಡೆಯಲ್ಲೆಲ್ಲಾ ಹೂಡಿಕೆದಾರರ ಪಾವತಿಗಾಗಿ ವಿದ್ಯುನ್ಮಾನ ಪಾವತಿ ಉತ್ಪನ್ನಗಳ(ಇಸಿಎಸ್/ ಎನ್‌ಇಎಫ್ಟಿ/ ಆರ್‌ಟಿಜಿಎಸ್) ಬಳಕೆಗೆ ಸಕಲ ಪ್ರಯತ್ನ ಮಾಡಲು ಒತ್ತಾಯಿಸುತ್ತೇವೆ.

6. ನೀವು ನಿಮ್ಮ ಎ ನಿಗದಿತ ಶಾಖೆಗಳಿಗೆ ಸೂಚನೆ ನೀಡತಕ್ಕದ್ದು ಮತ್ತು ಮೇಲಿನ ಸೂಚನೆಗಳ ಅನುಪಾಲನೆಯನ್ನು ಖಚಿತಪಡಿಸಿಕೊಳ್ಳತಕ್ಕದ್ದು.

7. ದಯವಿಟ್ಟು ಸ್ವೀಕೃತಿಯನ್ನು ನೀಡಿ.

ತಮ್ಮ ವಿಶ್ವಾಸಿ

ಡಾ॥ ಬಾಲು ಕೆ.
ಉಪ ಮಹಾ ವ್ಯವಸ್ಥಾಪಕರು

ಅನುಸೂಚಿ

## ಹೂಡಿಕೆದಾರರ ಹಕ್ಕುಗಳು

ಎ) ವಂತಿಗೆಗಳನ್ನು ನಗದು ರೂಪದಲ್ಲಿ ಸ್ವೀಕರಿಸಿದರೆ ಬಾಂಡುಗಳನ್ನು ಅದೇ ದಿನದಂದು ನೀಡಲಾಗುವುದು ಮತ್ತು ಚೆಕ್ಕುಗಳ ರೂಪದಲ್ಲಿ ವಂತಿಗೆ ಸ್ವೀಕರಿಸಿದ ಸಂದರ್ಭದಲ್ಲಿ, ಚೆಕ್ಕುಗಳ ನಗದೀಕರಣವಾದ ನಂತರ ಬಾಂಡುಗಳನ್ನು ನೀಡಲಾಗುವುದು.

ಬಿ) ಅರ್ಜಿ ಸಲ್ಲಿಸಿದ ದಿನಾಂಕದಿಂದ 5 ದಿನಗಳ ಒಳಗೆ ಧಾರಕ ಪ್ರಮಾಣ ಪತ್ರಗಳನ್ನು ನೀಡಲಾಗುವುದು.

ಸಿ) ವಂತಿಗೆಯನ್ನು ನಗದಾಗಿ ನೀಡಿದ್ದರೆ, ಬಡ್ಡಿಯನ್ನು ಅದೇ ದಿನಾಂಕದಿಂದ ಮತ್ತು ಚೆಕ್ಕುಗಳ ರೂಪದಲ್ಲಿ ನೀಡಿದ್ದ ಸಂದರ್ಭದಲ್ಲಿ ಚೆಕ್ಕು ನಗದೀಕರಣವಾದ ದಿನಾಂಕದಿಂದ ಬಾಂಡುಗಳ ಮೇಲೆ ಬಡ್ಡಿಯನ್ನು ಆಕರಿಸಲಾಗುವುದು. ಅರ್ಧವಾರ್ಷಿಕ ಬಡ್ಡಿ ಪಾವತಿ ಆದೇಶಗಳನ್ನು ನಿಗದಿತ ದಿನಾಂಕದ ಒಂದು ತಿಂಗಳಿನ ಮೊದಲೇ ರವಾನಿಸಲಾಗುವುದು.

ಡಿ) ಫೆಬ್ರವರಿ 1/ಆಗಸ್ಟ್ 1ರ ದಿನಾಂಕದಂದು ನೀಡಲಾಗುವ ಬಡ್ಡಿಯನ್ನು ಬ್ಯಾಂಕು ಖಾತೆಗೆ ಜಮಾ ಮಾಡಲಾಗುವುದು, ಅಥವಾ ಬಡ್ಡಿ ಆದೇಶದ ಮೂಲಕ, ಇತ್ತೀಚೆಗೆ ದಾಖಲಿಸಲಾದ ವಿಳಾಸಕ್ಕೆ ರವಾನಿಸಲಾಗುವುದು.

ಇ) ನಿಗದಿತ ದಿನಾಂಕದಿಂದ ಒಂದು ತಿಂಗಳ ಮೊದಲು ಹೂಡಿಕೆದಾರನಿಗೆ ಬಡ್ಡಿ ಪಾವತಿ ಆದೇಶವನ್ನು ನೀಡಲಾಗುವುದು.

ಎಫ್) ಬಾಂಡಿನ ಪಕ್ವತಾ ದಿನಾಂಕದ ಒಂದು ತಿಂಗಳ ಮೊದಲು, ಪಕ್ವತಾ ತಿಳುವಳಿಕೆ ಸೂಚನೆಯನ್ನು ನೀಡಲಾಗುವುದು.

ಜಿ) ಒಳನಾಡಿನ ಗ್ರಾಹಕರಿಗೆ ಅಸಲು ಮತ್ತು ಬಡ್ಡಿಯನ್ನು ವೆಚ್ಚ ರಹಿತ ಬೇಡಿಕೆ ಹುಂಡಿ (ಡಿಮಾಂಡ್ ಡ್ರಾಫ್ಟ್)ಯ ಮುಖಾಂತರ ಅಥವಾ ಅದೇ ಮೌಲ್ಯದ ಚೆಕ್ಕುಗಳ ಮೂಲಕ ಪಾವತಿಸುವ ಸೌಲಭ್ಯವಿದೆ.

ಎಚ್) ಬಾಂಡುಗಳ ಆಂತರಿಕ  ಬ್ಯಾಂಕ್ ಶಾಖಾ ವರ್ಗಾವಣೆ ಮತ್ತು ಅಂತರ ಬ್ಯಾಂಕು ನಡುವೆ ಶಾಖಾ ವರ್ಗಾವಣೆ ಸೌಲಭ್ಯವಿದೆ.

ಐ) ಉಳಿತಾಯ ಬಾಂಡುಗಳಿಗೆ ಸಂಬಂಧಿಸಿದ, ಹೂಡಿಕೆ, ಬಿಡುಗಡೆ, ಇ.ಸಿ.ಎಸ್‌ಗೆ ಆದೇಶ ಮುಂತಾದವುಗಳ ಅರ್ಜಿ ನಮೂನೆಗಳು ವೆಬ್ ತಾಣ www …com (ಬ್ಯಾಂಕುಗಳ ಮತ್ತು ಎಸ್‌ಎಚ್‌ಸಿಐಎಲ್ ವೆಬ್ ತಾಣ) ದಲ್ಲಿ ದೊರೆಯುತ್ತವೆ.

ಜೆ) ಬಾಂಡಿನ ಏಕೈಕ ಧಾರಕ ಅಥವಾ ಎಲ್ಲಾ ಜಂಟೀ ಧಾರಕರು ಸೇರಿ ಒಬ್ಬ ಅಥವಾ ಹೆಚ್ಚಿನ ವ್ಯಕ್ತಿಗಳನ್ನು ಬಾಂಡಿನ ಹಕ್ಕುದಾರನನ್ನಾಗಿ ನಾಮ ನಿರ್ದೇಶನ ಮಾಡಬಹುದು. ಅನಿವಾಸಿ ಭಾರತೀಯರನ್ನೂ ನಾಮ ನಿರ್ದೇಶನ ಮಾಡಬಹುದು.

ಕೆ) ನಾಮನಿರ್ದೇಶನದ ನೋಂದಾವಣೆಯನ್ನು ನೀಡಿಕೆ ಕಛೇರಿಯಲ್ಲಿ ಮಾಡಲಾಗುವುದು ಮತ್ತು ನೋಂದಾವಣೆ ಪ್ರಮಾಣ ಪತ್ರವನ್ನು ಧಾರಕನಿಗೆ ನೀಡಲಾಗುವುದು.

ಎಲ್) ಹೊಸದಾಗಿ ನಾಮನಿರ್ದೇಶನ ಮಾಡುವುದರ ಮೂಲಕ, ನಾಮ ನಿರ್ದೇಶನದಲ್ಲಿ ಬದಲಾವಣೆ ಮಾಡಬಹುದು.

ಎಮ್) ನೀಡಿಕೆ ಕಛೇರಿಗೆ ಕೋರಿಕೆ ಸಲ್ಲಿಸುವುದರ ಮೂಲಕ ಪ್ರಸ್ತುತವಿರುವ ನಾಮ ನಿರ್ದೇಶನವನ್ನು ರದ್ದುಪಡಿಸಬಹುದು.

ಎನ್) ಹೂಡಿಕೆ ದಿನಾಂಕದಿಂದ ಆರು ವರ್ಷಗಳು ಗತಿಸಿದ ನಂತರ ಬಿಡುಗಡೆಗೆ ಅರ್ಹವಾಗುತ್ತದೆ.

ಒ) ವಿದ್ಯುನ್ಮಾನ ತೀರುವೆ (ಇ.ಸಿ.ಎಸ್) ಆದೇಶವನ್ನು ನೀಡಿದಂತಹ ಸಂದರ್ಭದಲ್ಲಿ ಮರುಪಾವತಿ ಮೊತ್ತವನ್ನು ಹೂಡಿಕೆದಾರ ತನ್ನಷ್ಟಕ್ಕೆ ತಾನೆ ಪಡೆಯುವ ಹಕ್ಕನ್ನು ಹೊಂದಿರುತ್ತಾನೆ ಅಥವಾ ತೀರುವಳಿ ಸೂಚನೆ ಸಲ್ಲಿಕೆ ದಿನಾಂಕದಿಂದ ಐದು ಪೂರ್ಣ ಕೆಲಸದ ದಿನಗಳ ಒಳಗಾಗಿ ಪಾವತಿಸಲಾಗುವುದು.

ಪಿ) ಅರ್ಧವಾರ್ಷಿಕ ಬಡ್ಡಿ/ಬಿಡುಗಡೆ ಮೊತ್ತದ ಪಾವತಿಗೆ, (ಲಭ್ಯವಿರುವೆಡೆಯಲ್ಲಿ) ವಿದ್ಯುನ್ಮಾನ ಪಾವತಿ ಉತ್ಪನ್ನಗಳ (ಇಸಿಎಸ್/ ಎನ್ಇಎಫ್‌ಟಿ/ ಆರ್‌ಟಿಜಿಎಸ್) ಸೌಲಭ್ಯ ಪಡೆದುಕೊಳ್ಳಬಹುದು. ಬಡ್ಡಿ/ ಬಿಡುಗಡೆ ಮೊತ್ತವನ್ನು ಪಡೆದುಕೊಳ್ಳುವಲ್ಲಿ ವಿಳಂಬವಾಗದಿರಲು ಅರ್ಜಿದಾರರು ತಮ್ಮ ಆಯ್ಕೆಯನ್ನು ತಿಳಿಸಬೇಕು.

ಕ್ಯೂ) ವಿಳಂಬ ಪಾವತಿಗೆ, ಪ್ರಸ್ತುತವಿರುವ ಉಳಿತಾಯ ಬ್ಯಾಂಕ್ ದರದಲ್ಲಿ ಪರಿಹಾರ ಪಡೆಯುವ ಹಕ್ಕನ್ನು ಹೂಡಿಕೆದಾರರು ಹೊಂದಿರುತ್ತಾರೆ.

ಆರ್) ನೀಡಿಕೆ ಕಛೇರಿಯು ಮೇಲೆ ತಿಳಿಸಿರುವುದನ್ನು ಪಾಲಿಸದ ಸಂದರ್ಭದಲ್ಲಿ, ಹೂಡಿಕೆದಾರರು, ಕೌಂಟರಿನಲ್ಲಿಟ್ಟಿರುವ ನಮೂನೆಯಲ್ಲಿ ಲಿಖಿತ ದೂರನ್ನು, ಹತ್ತಿರದ ಭಾರತೀಯ ರಿಸರ್ವ್ ಬ್ಯಾಂಕಿಗೆ ಕೆಳಗಿನ ಈ ವಿಳಾಸಕ್ಕೆ ಕಳುಹಿಸಬೇಕು.

ಪ್ರಾದೇಶಿಕ ನಿರ್ದೇಶಕರು
ಭಾರತೀಯ ರಿಸರ್ವ್ ಬ್ಯಾಂಕ್
ಕುಂದುಕೊರತೆಗಳ ನಿವಾರಣಾ ಘಟಕ
– – – – – – – – –(ಪ್ರದೇಶ)

ನೀವು ನಿಮ್ಮ ದೂರನ್ನು ಇಲ್ಲಿಗೂ ಸಲ್ಲಿಸಬಹುದು.

ಮುಖ್ಯ ಮಹಾ ವ್ಯವಸ್ಥಾಪಕರು
ಭಾರತೀಯ ರಿಸರ್ವ್ ಬ್ಯಾಂಕ್
ಕೇಂದ್ರ ಕಛೇರಿ
ಸರ್ಕಾರಿ ಮತ್ತು ಬ್ಯಾಂಕು ಲೆಕ್ಕಪತ್ರಗಳ ಇಲಾಖೆ
ಬೈಕುಲ್ಲಾ(ಸೆಂಟ್ರಲ್ ರೈಲ್ವೆ ನಿಲ್ದಾಣದ ಎದುರು)
ಮುಂಬೈ 400 008
ಮಹಾರಾಷ್ಟ್ರ.